

## ಮೀನಿನ ರಂಗೋಲಿ

ರಂಗೋಲಿ ಎಂದೊಡನೆ ಹುಡಿ ಹಾಕಿ ಮಾಡುವ ಬಣ್ಣ ಬಣ್ಣದ ರಂಗೋಲಿ ನೆನಪಾಗುತ್ತದೆ. ಅಥವಾ ಹೂವಿನಿಂದ ಮಾಡಿದ, ತರಕಾರಿಯಿಂದ ಮಾಡಿದ ತರಹೇವಾರಿ ರೀತಿಯ ಬೀಜದಿಂದ ಮಾಡಿದ ರಂಗೋಲಿ ನೆನಪಾಗಬಹುದು. ಆದರೆ, ನಾನು ಹೇಳುತ್ತಿರುವುದು ಮೀನಿನಿಂದ ಮಾಡಿದ ರಂಗೋಲಿ. ಹೌದು, ಇತ್ತೀಚೆಗೆ ಕಾರವಾರದಲ್ಲಿ ಮೀನಿನ ರಂಗೋಲಿ ಸ್ಪರ್ಧೆ ಏರ್ಪಡಿಸಿದ್ದರು. ಹಲವಾರು ಮೀನಿನ ಪ್ರಿಯರು ಇದರಲ್ಲಿ ಭಾಗವಹಿಸಿ ತಮ್ಮ ಕೈಚಳಕವನ್ನು ತೋರಿಸಿದರು.

—ಜಯಾ ಯಾಜಿ, ಉತ್ತರ ಕನ್ನಡ



## ಇರುವೆ ಬಾವಿ

ಇರುವೆಗಳು ತಮಗೆ ಸಿಕ್ಕ ದವಸಧಾನ್ಯಗಳನ್ನು ಹೊತ್ತುಕೊಂಡು ಸಾಲಾಗಿ ಸಾಗಿ ಗೋಡೆಯ ಸಂದಿಯ ತೂತಿನಲ್ಲೋ, ಬಿರುಕುಬಿಟ್ಟ ಜಾಗದಲ್ಲೋ ಸಂಗ್ರಹಿಸಿಡುವುದನ್ನು ಕಂಡಿದ್ದೇವೆ. ಆದರೆ, ಇಲ್ಲೊಂದು ಕಡೆ ದೊಡ್ಡ ದೊಡ್ಡ ಕಪ್ಪು ಇರುವೆಗಳು ಗುಂಡಿ ತೋಡಿ ಮಣ್ಣನ್ನು ವೃತ್ತಾಕಾರದಲ್ಲಿ ಮೇಲೆ ಹಾಕಿ ಬಾವಿ ಮತ್ತು ಕಟ್ಟೆಯ ರೀತಿ ನಿರ್ಮಾಣ ಮಾಡಿವೆ. ಇಣುಕಿ ನೋಡಿದರೆ ಗುಂಡಿಯ ತಳ ಕಾಣುತ್ತಿರಲಿಲ್ಲ. ಇದು ಕಂಡದ್ದು ಬೆಂಗಳೂರಿನ ಕಬ್ಬನ್ ಉದ್ಯಾನದಲ್ಲಿ. ಒಂದು ಕಡೆ ಉದ್ಯಾನದಲ್ಲಿ ಮಳೆನೀರನ್ನು ಹಿಡಿದಿಡಲು ಇಂಗುಗುಂಡಿಗಳ ನಿರ್ಮಾಣವಾಗುತ್ತಿತ್ತು. ಇನ್ನೊಂದು ಕಡೆ ಇರುವೆಗಳಿಂದಲೇ ಇಂತಹ ಹಲವಾರು ಸಣ್ಣ ಸಣ್ಣ ಗುಂಡಿಗಳನ್ನು ಪ್ರಕೃತಿಯೇ ನಿರ್ಮಾಣ ಮಾಡುತ್ತಿತ್ತು. ಇವು ಸಹ ಇಂಗುಗುಂಡಿಯ ಕೆಲಸ ಮಾಡುತ್ತಿರಬಹುದು. ಇರುವೆಗಳ ಈ ನಿಸ್ವಾರ್ಥ ಸೇವೆಗೊಂದು ನಮನ.

—ಶಾಲಿನಿ ನಾಯಕ್, ಬೆಂಗಳೂರು

